ಓ ಎಸ್ ಃ 35/2015 ಡಿ ಡಬ್ಲ್ಯೂ ಃ 1 - ಎನ್. ರವೀಂದ್ರ

ದಿನಾಂಕಃ 11.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಃ ಶ್ರೀ ಎಂ ಎಸ್ ವಕೀಲರಿಂದಃ

6. ನನ್ನ ತಂದೆ ನಿಂಗೇಗೌಡ 1 ನೇ ಪ್ರತಿವಾದಿಯಾದ ಜವರೇಗೌಡರವರಿಂದ ದಾವಾ ಆಸ್ತಿಯ ಐಟಂ ನಂ.4 ಅನ್ನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ನನ್ನ ತಾತ 1 ನೇ ಪ್ರತಿವಾದಿಯಾದ ಜವರೇಗೌಡರವರಿಂದ ದಾವಾ ಆಸ್ತಿಯ ಐಟಂ ನಂ.4 ಅನ್ನು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ. 9/8 ರಲ್ಲಿ ನಮ್ಮ ತಾತ 70 ಗುಂಟೆಯನ್ನು ಖರೀದಿಸಿರುತ್ತಾರೆ. ನನ್ನ ತಾತ ಸರ್ವೆ ನಂ. 9/8 ರಲ್ಲಿ 70 ಗುಂಟೆಯನ್ನು ಖರೀದಿಸಿರುತ್ತಾರೆ ಎಂದು ತೋರಿಸಲು ನಾನು ಕ್ರಯ ಪತ್ರವನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿ ನಿಡಿ 1 ಆಗಿರುತ್ತದೆ. ನಿಡಿ 1 ಅನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿ 1 ಎಕರೆ 22 ಗುಂಟೆ ಇದೆ, ಆದರೆ ಪೂರ್ವ-ಪಶ್ಚಿಮ, ಉತ್ತರ - ದಕ್ಷಿಣ 70 ಗುಂಟೆ ಇದೆ ಎಂದು ಕಾಣಿಸಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ 1 ಅನ್ನು ತೋರಿಸಿ ಪೂರ್ವ-ಪಶ್ಚಿಮ, ಉತ್ತರ - ದಕ್ಷಿಣ 70 ಗುಂಟೆ ಇದೆ ಎಂದು ಎಲ್ಲಿ ಕಾಣಿಸಿದೆ ಎಂದರೆ ಸಾಕ್ಷಿ ದಾಖಲಾತಿಯನ್ನು ನೋಡಿ ಆ ರೀತಿ ಎಲ್ಲಿಯೂ ಕಾಣಿಸಿಲ್ಲ ಎಂದು ಹೇಳುತ್ತಾರೆ.

7. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಕಂಡಿಕೆ 3 ರಲ್ಲಿ ಸರ್ವೆ ನಂ. 9/8 ರಲ್ಲಿ 1 ಎಕರೆ 22 ಗುಂಟೆಯನ್ನು ಮಾತ್ರ ಬರೆಸಿದ್ದೇನೆ ಎಂದರೆ ಸರಿ. ನಿಡಿ 35 ರಲ್ಲಿ ವಿಭಾಗವನ್ನು ನಾನು ಮತ್ತು ನನ್ನ ತಮ್ಮ ನಿಜಗುಣ ಮತ್ತು ರಮೇಶ ಮಾಡಿಕೊಂಡಿರುವುದಾಗಿ ತೋರಿಸಲಾಗಿದೆ. ನಿಡಿ 35 ರ ಪ್ರಕಾರ ನನಗೆ ಸರ್ವೆ ನಂ.11/1 ರಲ್ಲಿ 1 ಎಕರೆ ಬಂದಿರುತ್ತದೆ. ಅದೇ ಸರ್ವೆ ನಂಬರ್ ನಲ್ಲಿ ನನ್ನ ತಮ್ಮ ನಿಜಗುಣನಿಗೆ 1 ಎಕರೆ ಬಂದಿರುತ್ತದೆ. ನನ್ನ ತಮ್ಮ ರಮೇಶನಿಗೆ ಸರ್ವೆ ನಂ. 9/8 ರಲ್ಲಿ 62 ಗುಂಟೆ ಹೋಗಿರುತ್ತದೆ. ನನ್ನ ತಮ್ಮ ರಮೇಶ ಜೀವಂತವಾಗಿರುತ್ತಾರೆ. ಸದರಿ ಜಮೀನಾದ 9/8 ರಲ್ಲಿ ನನ್ನ ತಮ್ಮ ರಮೇಶ ಸ್ವಾಧೀನಾದಲ್ಲಿರುತ್ತಾರೆ ಎಂದರೆ ಸಾಕ್ಷಿ ಇರುತ್ತಾರೆ ಎಂದು ಹೇಳುತ್ತಾರೆ. ಸದರಿ ಜಮೀನು ಒಂದೇ ಚೆಕ್ಕುಬಂದಿಯ ಒಳಗೆ ಇರುತ್ತದೆ. ನಮ್ಮ ವಿಭಾಗ ಪತ್ರದಲ್ಲೂ ಒಂದೇ ಚೆಕ್ಕುಬಂದಿಯನ್ನು ತೋರಿಸಿರುತ್ತೇವೆ. ಸರ್ವೆ ನಂ. 9/8 ರಲ್ಲಿ 1 ಎಕರೆ 22 ಗುಂಟೆಯಲ್ಲಿ ಒಂದೇ ಚೆಕ್ಕುಬಂದಿ ನಮೂದಾಗಿದೆ ಎಂದರೆ ಸಾಕ್ಷಿ 1 ಎಕರೆ 30 ಗುಂಟೆಗೆ ಒಂದೇ ಚೆಕ್ಕುಬಂದಿ ಇದೆ ಎಂದು ನುಡಿಯುತ್ತಾರೆ. ಸದರಿ ವಿಭಾಗ ಪತ್ರದ ಮೂಲ ದಾಖಲಾತಿ ಬ್ಯಾಂಕ್ ನಲ್ಲಿ ನೀಡಿರುತ್ತೇವೆ. ನನ್ನ ಭಾಗಕ್ಕೆ ಬಂದಿರುವ ಆಸ್ತಿಗೆ

ಸಂಬಂಧಿಸಿದ ವಿಭಾಗ ಪತ್ರವನ್ನು ಶ್ರೀರಂಗಪಟ್ಟಣದ ಕೆನರಾ ಬ್ಯಾಂಕ್ ನಲ್ಲಿ ಜಮಾ ಮಾಡಿರುತ್ತೇನೆ. ಸದರಿ ನನಗೆ ಆದ ವಿಭಾಗ ಪತ್ರದ ಮೂಲ ದಾಖಲಾತಿಯನ್ನು ಕೆನರಾ ಬ್ಯಾಂಕ್ ನಲ್ಲಿ ಜಮಾ ಮಾಡಿದ್ದೇನೆ ಎಂದು ನನ್ನ ಲಿಖಿತ ತಕರಾರಿನಲ್ಲಿ ತಿಳಿಸಿರುತ್ತೇನೆ. ನಾನು ನನ್ನ ಲಿಖಿತ ಹೇಳಿಕೆಯನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಲಿಖಿತ ಹೇಳಿಕೆಯಲ್ಲಿ ವಿಭಾಗ ಪತ್ರದ ಮೂಲ ದಾಖಲಾತಿಯನ್ನು ಕೆನರಾ ಬ್ಯಾಂಕ್ ನಲ್ಲಿ ಜಮಾ ಮಾಡಿದ್ದೇನೆ ಎಂದು ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ಸರ್ವೆ ನಂ. 9/8 ರಮೇಶನ ಪಾಲಿಗೆ ಹೋಗಿದ್ದು, ಅದರ ಮೂಲ ದಾಖಲಾತಿ ರಮೇಶನ ಬಳಿ ಇರುತ್ತದೆ. ಸಾಕ್ಷಿಗೆ ನಿಡಿ 35 ಅನ್ನು ತೋರಿಸಿ ಅದರಲ್ಲಿ ರಮೇಶನಿಗೆ ಬಂದ ಸರ್ವೆ ನಂ. 9/8 ರ ಆಸ್ತಿಯ ವಿವರದಲ್ಲಿ 1 ಎಕರೆಗೆ ಚೆಕ್ಕುಬಂದಿ ತೋರಿಸಲಾಗಿದೆ ಎಂದರೆ ಸಾಕ್ಷಿ ಅದನ್ನು ಓದಿ ಹೌದು ಎನ್ನುತ್ತಾರೆ. ಅದೇ ದಾಖಲಾತಿಯಲ್ಲಿ 22 ಗುಂಟೆಗೆ ಪ್ರತ್ಯೇಕ ಚೆಕ್ಕುಬಂದಿ ತೋರಿಸಲಾಗಿದೆ ಎಂದರೆ ಸರಿ. ವಿಭಾಗ ಪತ್ರದಂತೆ ರೆವಿನ್ಯೂ ದಾಖಲಾತಿಗಳು ಬದಲಾಗಿರುವುದಿಲ್ಲ. ಸಾಕ್ಷಿ ಪುನಃ ರೆವಿನ್ಯೂ ದಾಖಲಾತಿ ಬದಲಾಗಿದೆ, ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ರೆವಿನ್ಯೂ ದಾಖಲಾತಿಯಲ್ಲಿ 1 ಎಕರೆಗೆ ಪ್ರತ್ಯೇಕ ಆರ್ ಟಿ ಸಿ ಹಾಗೂ 22 ಗುಂಟೆಗೆ ಪ್ರತ್ಯೇಕ ಆರ್ ಟಿ ಸಿ ಬಂದಿಲ್ಲ ಒಟ್ಟು 1 ಎಕರೆ 22 ಗುಂಟೆಗೆ ಒಂದೇ ಆರ್ ಟಿ ಸಿ ಬಂದಿದೆ ಎಂದು ನುಡಿಯುತ್ತಾರೆ. ವಿಭಾಗ ಪತ್ರದಂತೆ ಮ್ಯೂಟೇಷನ್ ಬದಲಾಗಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದಂತೆ ಮ್ಯೂಟೇಷನ್ ಆಗಿರುವುದಿಲ್ಲ ಹಾಗೂ ಆರ್ ಟಿ ಸಿ ಸಹ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.9/8 ಕ್ಕೆ ಸಂಬಂಧಿಸಿದಂತೆ ಮೂಲ ಕ್ರಯದಾರರಾದ 1 ನೇ ಪ್ರತಿವಾದಿಯ ಹೆಸರಿಗೆ 8 ಗುಂಟೆಗೆ ಆರ್ ಟಿ ಸಿ ಬರುತ್ತಿದೆ ಎಂದರೆ ಸರಿ. 1 ನೇ ಪ್ರತಿವಾದಿಯ ವಾರಸುದಾರರಾದ ವಾದಿಯರು ಸರ್ವೆ ನಂ.9/8 ರ 8 ಗುಂಟೆ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿ ಕೇವಲ ಆರ್ ಟಿ ಸಿ ಇದ್ದು, ಸ್ವಾಧೀನ ಇಲ್ಲ ಎಂದು ನುಡಿಯುತ್ತಾರೆ.

8. ಸಾಮಾನ್ಯವಾಗಿ ಆರ್ ಟಿ ಸಿ ಯಾರ ಹೆಸರನಲ್ಲಿರುತ್ತದೋ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಸರ್ವೆ ನಂ.9/8 ರ ಆಸ್ತಿಯನ್ನು ನನ್ನ ತಾತ ವಾದಿಯ ಗಮನಕ್ಕೆ ತರದಂತೆ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ವಾದಿಯರಿಗೆ ತಿಳಿಸಿ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ನಿಡಿ 1 ಕ್ರಯ ಪತ್ರದಲ್ಲಿ ವಾದಿಯರ ಹೆಸರು ಇಲ್ಲ ಎಂದರೆ ಸಾಕ್ಷಿ ಆಗ ವಾದಿಯರು ಮೈನರ್ ಎಂದು ನುಡಿಯುತ್ತಾರೆ. ನಿಡಿ 1 ರಲ್ಲಿ ವಾದಿಯರನ್ನು ಮೈನರ್ ಆಗಿ ತೋರಿಸಿ ಅವರ ಗಾರ್ಡಿಯನ್ ಹೆಸರುಗಳನ್ನು ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ನಮ್ಮ 3 ಎಕರೆ ಜಮೀನು ವಾದಿಯ ಹೆಸರಿನಲ್ಲಿದ್ದು, ಅದರಲ್ಲಿನಾವೂ ಕೂಡ ಸಹಿ ಮಾಡಿಲ್ಲ ಎಂದು

ನುಡಿಯುತ್ತಾರೆ. ನಾನು ಲಿಖಿತ ತಕರಾರಿನಲ್ಲಿ ವಾದಿಯರ 3 ಎಕರೆಗೆ ಜಮೀನಿನ ದಾಖಲಾತಿಯಲ್ಲಿ ನಾವು ಸಹಿ ಮಾಡಿಲ್ಲ ಎಂದು ತಿಳಿಸಿಲ್ಲ.

4. ನಾನು ಲಿಖಿತ ತಕರಾರನ್ನು ಸಲ್ಲಿಸುವ ಪೂರ್ವದಲ್ಲಿ ನಮ್ಮ ವಕೀಲರ ಬಳಿ ವಾದ ಪತ್ರದ ಸಂಪೂರ್ಣ ಅಂಶಗಳನ್ನು ತಿಳಿಸಿದುಕೊಂಡಿರುತ್ತೇನೆ ಎಂದರೆ ಸರಿ. ನಮ್ಮ ತಾತ ಖರೀದಿಸಿದ ಆಸ್ತಿಯಲ್ಲಿ ಸರ್ವೆ ನಂ.9/8 ರಲ್ಲಿ ವಾದಿಯರಿಗೆ ಭಾಗಾಂಶ ಹೋಗಬಾರದೆಂಬ ದುರುದ್ದೇಶದಿಂದ ನಾನು ಸುಳ್ಳು ಲಿಖಿತ ತಕರಾರನ್ನು ಸಲ್ಲಿಸಿ ಸುಳ್ಳು ಹೇಳಿಕೆಯನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಹಕ್ಕನ್ನು ಮೊಟಕುಗೊಳಿಸಬೇಕೆಂಬ ದುರುದ್ದೇಶದಿಂದ ನಾನು ಸುಳ್ಳು ದಾಖಲಾತಿಗಳ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 35 ಸೃಷ್ಟಿಸಿರುವ ದಾಖಲಾತಿ ಎಂದರೆ ಸರಿಯಲ್ಲ. ನಿಡಿ 35 ಸೃಷ್ಟಿಸಿದ ದಾಖಲಾತಿಯಾದ ಕಾರಣಕ್ಕೆ ನಾವು ರೆವಿನ್ಯೂ ದಾಖಲಾತಿಗಳನ್ನು ಬದಲಾವಣೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ